# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ ನ್ಯಾಯಾಲಯ, ಟಿ.ನರಸೀಪುರ

**ಸಿಸಿ ನಂಃ 584/2023 ಸಿಡಬ್ಲ್ಯೂ- 8 ಪಿಡಬ್ಲ್ಯೂ-5**

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜೇಶ್ ಎನ್. |
| ತಂದೆಯ ಹೆಸರು | : | ನಂಜಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು ಮಳವಳ್ಳಿ |
| ವಾಸಸ್ಥಳ | : | ಮಳವಳ್ಳಿ |

**ಸಾಕ್ಷಿಗೆ ದಿಃ 22.01.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ದಿ.25.07.2019 ರಿಂದ 05.08.2023 ರವರೆಗೆ ಅಬಕಾರಿ ನಿರೀಕ್ಷಕರಾಗಿ ಟಿ.ನರಸೀಪುರ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. .

ದಿ.20.03.2023 ರಂದು ಚಾ.ಸಾ.7 ರವರಿಂದ ಈ ಪ್ರಕರಣ ಕಡತವನ್ನು ಸ್ವೀಕರಿಸಿ ಪರಿಶೀಲಿಸಿರುತ್ತೇನೆ. ದಿ.21.03.2023 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪೂರ್ವ ವಿಭಾಗ, ಮೈಸೂರು ಇವರಿಂದ ಬಿ.ವೈ. ವರದಿಯನ್ನು ಪಡೆದಿರುತ್ತೇನೆ. ದಿ,20.05.2023 ರಂದು ಮಹಜರ್ ಸಾಕ್ಷಿದಾರರಾದ ಚಾಸಾ.2 ರಿಂದ 5 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿ.21.05.2023 ರಂದು ವಾಹನ ಮಾಲಿಕರಿಗೆ ನೋಟಿಸನ್ನು ಜಾರಿ ಮಾಡಿರುತ್ತೇನೆ. ದಿ.20.07.2023 ರಂದು ರಾಸಾಯನಿಕ ವರದಿಯನ್ನು ಚಾ.ಸಾ.4 ರವರಿಂದ ಪಡೆದಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಆರೋಪ ಸಾಬೀತಾದ್ದರಿಂದ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ದಿ.12.04.2023ರ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು, ಸಾಕ್ಷಿಯು ಪ್ರಾದೇಶಿಕ ಸಾರಿಗೆ ಅಧಿಕಾರಿ ರವರು ನೀಡಿದ B extract ನ್ನು ನೋಡಿ ಗುರುತಿಸಿದ್ದು, ನಿ.ಪಿ.14 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಸಿ. ವಕೀಲರಿಂದಃ</u>**

ನಿ.ಪಿ.13 ಮತ್ತು 14 ದಾಖಲೆಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾ.ಸಾ.2 ರಿಂದ 5 ರವರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಆರೋಪಿ ಸಾಬೀತು ಆಗದೆ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

**<u>(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)</u>**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**